) ಅನ್ವೇಷಣೆ ಮುಂಗಿದು, ಅಂದಾಜು ಪಟ್ಟಿಯು ಮಂಜೂರಾದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಹಿಂದಿನ ಅನುದಾನ ಪಡೆಯುತ್ತಿದ್ದ ಪ್ರಾಥಮಿಕ ಶಾಲಾ ಶಿಕ್ಷಕರ ಉಪದಾನ ಹಣದ ಅಲ್ಪ ಭಾಗವನ್ನು ತಡೆಹಿಡಿದಿರುವ ಬಗ್ಗೆ

೫೬೯. ಶ್ರೀ ಎಂ. ರಾಮಪ್ಪ (ಬಳ್ಳಾರಿ).— ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಎ) ಬಳ್ಳಾರಿ ಜಿಲ್ಲೆಯಲ್ಲಿ ದಿನಾಂಕ:೧–೧–೬೯ರಲ್ಲಿ ಸರ್ಕಾರವು ತನ್ನ ವಶಕ್ಕೆ ತೆಗೆದುಕೊಂಡು ಹಿಂದಿನ ಅನುದಾನ ಪಡೆಯುತ್ತಿದ್ದ ಪ್ರಾಥಮಿಕ ಶಾಲಾ ಶಿಕ್ಷಕರ ಉಪದಾನ ಹಣದ ಅಲ್ಪ ಭಾಗವನ್ನು ಮಹಾಲೇಖಪಾಲಕರು ತಡೆಹಿಡಿದಿರುವ ಸಂಗತಿ ನಿಜವೇ ?

ಬಿ) ಸರ್ಕಾರಿ ಶಿಕ್ಷಕರಿಗೆ ನೀಡುತ್ತಿರುವ ಎಲ್ಲಾ ಸೌಲಭ್ಯಗಳನ್ನು ಸರಿಸಮಾನವಾಗಿ ಈ ಶಿಕ್ಷಕರಿಗೂ ವಿಸ್ತರಿಸದೆ ಇರುವುದು ನಿಜವೇ ?

ಸಿ) ಹೈದ್ರಾಬಾದ್ ವೇತನ ಶ್ರೇಣಿಯನ್ನು ದಿನಾಂಕ:೩೧–೧೨–೧೯೬೯ ರೊಳಗೆ ಸೇವೆಗೆ ಸೇರಿದ ಎಲ್ಲಾ ಶಿಕ್ಷಕರಿಗೂ ವಿಸ್ತರಿಸಿರುವುದು ನಿಜವೇ ಹಾಗಿದಲ್ಲಿ ದಿನಾಂಕ:೧–೧–೬೯ರಲ್ಲಿ ಹಿಂದಿನ ಅನುದಾನ ಪಡೆಯುತ್ತಿದ್ದ ಶಾಲಾ ಶಿಕ್ಷಕರ ಸೇವೆಯನ್ನು ಸರ್ಕಾರಿ ಶಾಲಾ ಶಿಕ್ಷಕರ ಸೇವೆಯೊಂದಿಗೆ ವಿಲೀನ ಗೊಳಿಸಿದ್ದು ಮಹಾಲೇಖಪಾಲಕರು ಅಂತವರ ಉಪದಾನದ ಹಣವನ್ನು ತಡೆಹಿಡಿಯಲು ಕಾರಣಗಳೇನು?

ಡಿ) ತಡೆಹಿಡಿದಿರುವ ಉಪಾದಾನದ ಹಣವನ್ನು ಬಿಡುಗಡೆಗೊಳಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಡಿ. ಮಂಜನಾಥ್ (ಶಿಕ್ಷಣ ಮಂತ್ರಿಗಳು).—

ಎ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಬಿ) ಸರ್ಕಾರಿ ನೌಕರರಿಗೆ ನೀಡುವ ಎಲ್ಲಾ ಸೌಲಭ್ಯಗಳನ್ನು ಸರಿಸಮಂವಾಗಿ ಈ ಶಿಕ್ಷಕರಿಗೂ ವಿಸ್ತರಿಸಿದೆ.

ಸಿ) ಸರ್ಕಾರವು ಹೈದ್ರಾಬಾದ್ ವೇತನ ಶ್ರೇಣಿಯನ್ನು ದಿನಾಂಕ:೩೧–೧೨–೬೯ ರೊಳಗೆ ಸೇವೆಗೆ ಸೇರಿದ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೂ ವಿಸ್ತರಿಸಿದೆ. ಸರ್ಕಾರವು ತನ್ನ ವಶಕ್ಕೆ ತೆಗೆದು ಕೊಂಡ ಎಲ್ಲಾ ಹಿಂದಿನ ಅನುದಾನ ಶಾಲೆಗಳ ಸಿಬ್ಬಂದಿಯ ಹಿಂದಿನ ಸೇವೆಯನ್ನು ಆದೇಶ ಸಂಖ್ಯೆ: ಇಡಿ ೩೦ ಪಿಎಂಎಸ್ ೬೮, ದಿನಾಂಕ.೧೭–೧–೧೯೬೯ರಲ್ಲಿ ಸರ್ಕಾರಿ ನೌಕರರ ಸೇವೆಯಂತೆಯೇ ಪರಿಗಣಿಸಿದೆ. ಹಿಂದಿನ ಅನುದಾನ ಶಾಲಾ ಶಿಕ್ಷಕರ ಉಪದಾನದ ಹಣವನ್ನು ಮಹಾಲೇಖಪಾಲಕರು ತಡೆಹಿಡಿದಿರುವ ಅಂತವು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಡಿ) ಉದ್ಭವಿಸುವುದಿಲ್ಲ.

ಸೇತುವೆ ತೆರಿಗೆಯನ್ನು ವಸೂಲು ಮಾಡುವ ಬಗ್ಗೆ

೫೯೦. ಶ್ರೀ ಕೆ. ಜೆ. ಜಾರ್ಜ್ (ಭಾರತಿ ನಗರ).— ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಎ) ಹೆದ್ದಾರಿಗಳ ಮೇಲಿನ ಸೇತುವೆಗೆ ತೆರಿಗೆಯನ್ನು ಎಂದಿನಿಂದ ವಸೂಲು ಮಾಡಲಾಗುತ್ತಿದೆ.

ಬಿ) ಇದು ವರೆವಿಗೂ ವಸೂಲಾಗಿರುವ ಹಣ ಎಷ್ಟು; (ಜಿಲ್ಲಾವಾರು ವಿವರಗಳನ್ನು ಕೊಡುವುದು)

ಸಿ) ಈ ತೆರಿಗೆಯಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?